**ಡಿಡಬ್ಲೂ.1: ದೇವಿಕಾ ಎಲ್ .,**

**ದಿನಾಂಕಃ 09.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ**

ನಾನು ಜ್ಞಾನಭಾರತಿಯ ಮರಿಯಪ್ಪನ ಪಾಳ್ಯದ ಪಿವಿಪಿ ಶಾಲೆಯ ಬಳಿ ಸುಮಾರು 7 ವರ್ಷಗಳಿಂದ ವಾಸವಾಗಿರುತ್ತೇನೆ. ನಮ್ಮ ಮನೆಯಲ್ಲಿ ನಾನು, ನನ್ನ ಮಗ ಹೇಮಂತ್ ವಾಸವಾಗಿರುತ್ತೇವೆ. ನನ್ನ ಮಗ Flipkart ನಲ್ಲಿ ಡೆಲಿವರಿ ಬಾಯ್ ಆಗಿ ಎರಡು ವರ್ಷಗಳಿಂದ ಕೆಲಸ ಮಾಡುತ್ತಾನೆ. ಕಳೆದ 8 ವರ್ಷಗಳ ಹಿಂದೆ ನಾನು ಹಾಗೂ ನನ್ನ ಮಗ ಚಾಮರಾಜಪೇಟೆಯ ಬಿನ್ನಿಮಿಲ್ ಎದುರುಗಡೆ ಇದ್ದಂತಹ ವಿ.ಆರ್.ಪಿ.ಎಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆವು ಎಂದರೆ ಸರಿ. ನನ್ನ ಅಕ್ಕ ವೀಣಾ ಹಾಗೂ ತಂಗಿ ಶೋಭಾ ಎಂದರೆ ಸರಿ. ನನಗೆ ಇಬ್ಬರು ಸಹೋದರರು ಇರುತ್ತಾರೆ ಎಂದರೆ ಸರಿ. ನಮ್ಮ ಅಕ್ಕ ವೀಣಾ ರವರು ಬಿನ್ನಿಮಿಲ್ ಮಾಲೀಕರ ಮನೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಅವರು ಆ ಕಂಪನಿಯಲ್ಲಿ ಕಚೇರಿ ಸಹಾಯಕರಾಗಿ ಕೆಲಸ ಮಾಡುತ್ತಾರೆ.

**2.** ದೂರುದಾರರೂ ಸಹ ಬಿನ್ನಿಮಿಲ್ ಬಳಿ ಸುಮಾರು ವರ್ಷಗಳಿಂದ ವಾಸವಾಗಿರುತ್ತಾರೆ ಎಂದರೆ ಸರಿ. ದೂರುದಾರರು ನಿಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ಪರಿಚಯವಿರುತ್ತಾರೆ ಎಂದರೆ ಸರಿ. ವಿ.ಆರ್.ಪಿ.ಎಲ್ ಕಂಪನಿ ಕ್ರಮೇಣ ನಷ್ಟ ಹೊಂದುತ್ತಿದ್ದ ಕಾರಣ ಸರಿಯಾಗಿ ವೇತನ ನೀಡುತ್ತಿರಲಿಲ್ಲ ಎಂದರೆ ಸರಿ. ಪಿರ್ಯಾದುದಾರರು ನಿಮ್ಮ ಅಕ್ಕನ ಮುಖಾಂತರ ನಿಮಗೆ ಪರಿಚಯವಾಗಿ, ಪರಿಚಯವಾದ ನಂತರ ನೀವು ಪಿರ್ಯಾದುದಾರರಿಂದ ನಿಮಗೆ ಅವಶ್ಯಕತೆವಿದ್ದಲ್ಲಿ ಆಗಾಗ ಸಣ್ಣ ಪುಟ್ಟ ಸಾಲ ಪಡೆದು ಅದನ್ನು ಮರುಪಾವತಿ ಮಾಡುತ್ತಿದ್ದೀರಿ ಎಂದರೆ ಸರಿ. ನಿಮ್ಮ ಕುಟುಂಬದ ನಿರ್ವಹಣೆಗಾಗಿ ನೀವು ಕೆಲಸ ನಿರ್ವಹಿಸುತ್ತಿದ್ದ ಸ್ಥಳದಲ್ಲಿನ

ನಿಮ್ಮ ಸಹೋದ್ಯೋಗಿಗಳ ಬಳಿ ಸಾಲ ಪಡೆದುಕೊಳ್ಳುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಜೊತೆ ಲತಾ, ರೂಪ ಮತ್ತು ರಕ್ಷಿತಾ ಇವರು ಸಹ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರಿಂದಲೂ ಸಹ ನೀವು ಸಾಲ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಲತಾ ಎಂಬುವವರ ಬಳಿ ಮಾತ್ರ ಸಾಲ ಪಡೆದುಕೊಂಡು ಅದನ್ನು ಮರುಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ.

**3.** ನಿಮ್ಮ ಕುಟುಂಬ ನಿರ್ವಹಣೆಗಾಗಿ ಪಿರ್ಯಾದುದಾರರಿಂದ ರೂ.1,50,000/- ಗಳನ್ನು 2023 ನೇ ಜನವರಿ ಮಾಹೆಯಲ್ಲಿ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನಾನು 40 ಸಾವಿರ ರೂ.ಗಳನ್ನು ಮಾತ್ರ ಪಡೆದುಕೊಂಡಿದ್ದೆನು. 40 ಸಾವಿರ ರೂ.ಗಳಲ್ಲಿ 30 ಸಾವಿರ ರೂ.ಗಳನ್ನು ಮರುಪಾವತಿಸಿರುತ್ತೇನೆ, ಉಳಿಕೆ 10 ಸಾವಿರ ರೂ.ಗಳ ಜೊತೆ ಇನ್ನು 10 ಸಾವಿರ ರೂ.ಗಳನ್ನು ಕೊಡಬೇಕಾಗಿತ್ತು ಒಟ್ಟು ನಾನು ಪಿರ್ಯಾದುದಾರರಿಗೆ 20 ಸಾವಿರ ರೂ. ಗಳನ್ನು ಮಾತ್ರ ಮರುಪಾವತಿಸಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರಿಂದ ನೀವು ರೂ.1,50,000/- ಹಣ ಪಡೆದುಕೊಂಡಿದ್ದರೂ ಸಹ 40 ಸಾವಿರ ರೂ.ಗಳನ್ನು ಮಾತ್ರ ಸಾಲ ಪಡೆದುಕೊಂಡಿದ್ದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮಗನೂ ಸಹ ಪಿರ್ಯಾದುದಾರರಿಂದ ಅವಶ್ಯಕತೆ ಇದ್ದಲ್ಲಿ ಹಣ ಪಡೆದುಕೊಂಡು ಅದನ್ನು ಮರುಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

**4.** ನಿ.ಪಿ.1 ರ ಚೆಕ್ಕು ನನ್ನದಾಗಿರುತ್ತದೆ. ಅದರಲ್ಲಿನ ಸಹಿ ನನ್ನದಾಗಿರುತ್ತದೆ. ನಿ.ಪಿ.1 ರಲ್ಲಿನ ಬರವಣಿಗೆ ನನ್ನದಾಗಿರುವುದಿಲ್ಲ. ಆರೋಪಿ ಪಿರ್ಯಾದುದಾರರಿಂದ ಪಡೆದುಕೊಂಡ ಹಣದ ಮರುಪಾವತಿಗಾಗಿ ನಿ.ಪಿ.1 ರ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಪಿರ್ಯಾದುದಾರರಿಂದ ರೂ.1,50,000/-

ಹಣ ಪಡೆದುಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪಿರ್ಯಾದುದಾರರು ವಿವಾದಿತ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿದಾಗ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಹಿಂದಿರುಗಿರುತ್ತದೆ ಎಂದರೆ ಸರಿಯಲ್ಲ. ಆ ನಂತರ ಪಿರ್ಯಾದುದಾರರು ನಿಮಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಟೀಸನ್ನು ನಿಮ್ಮ ಮಗ ಸ್ವೀಕರಿಸಿದ್ದರೂ ಸಹ ನೀವು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೋಟೀಸಿನಲ್ಲಿ ನಮೂದಿಸಿರುವ ವಿಳಾಸದಲ್ಲಿ ನೀವು ವಾಸವಾಗಿರುತ್ತೀರಿ ಎಂದರೆ ಸರಿಯಲ್ಲ.

**5.** ನಾನು ಪಿವಿಪಿ ಶಾಲೆಯ ಬಳಿ ವಾಸವಾಗಿರುತ್ತೇನೆ, ನನ್ನ ಮನೆಯ ನಿರ್ದಿಷ್ಟ ವಿಳಾಸ ನನಗೆ ಹೇಳಲಾಗುವುದಿಲ್ಲ. ನಿ.ಡಿ.1 ರಲ್ಲಿನ ವಿಳಾಸ ನನ್ನದಾಗಿರುತ್ತದೆ. ನಿ.ಡಿ.1 ರಲ್ಲಿ ನಮೂದಾಗಿರುವ ನಿಮ್ಮ ವಿಳಾಸ ಹಾಗೂ ಪಿರ್ಯಾದಿನಲ್ಲಿ ನಮೂದಾಗಿರುವ ನಿಮ್ಮ 1 ನೇ ವಿಳಾಸ ಎರಡೂ ಒಂದೇಯಾಗಿರುತ್ತದೆ ಎಂದರೆ ಸರಿ. ಪಿರ್ಯಾದುದಾರರು ನಿ.ಡಿ.1 ರಲ್ಲಿನ ವಿಳಾಸಕ್ಕೂ ಸಹ ನೋಟೀಸು ನೀಡಿದ್ದು ಸದರಿ ನೋಟೀಸು ಡೋರ್ ಲಾಕ್ ಎಂಬ ಹಿಂಬರಹದೊಂದಿಗೆ ಹಿಂದಿರುಗಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಆ ವೇಳೆಯಲ್ಲಿ ನಾವು ಮನೆಯಲ್ಲಿ ಇರಲಿಲ್ಲ. ಎರಡನೇ ವಿಳಾಸಕ್ಕೂ ಸಹ ಪಿರ್ಯಾದುದಾರರು ನೋಟೀಸು ನೀಡಿದ್ದು ಅ ನೋಟೀಸನ್ನು ನಿಮ್ಮ ಮಗ ಸಹಿ ಮಾಡಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಗನೂ ಸಹ ನೋಟೀಸು ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಕರಣ ದಾಖಲಿಸಿರುವ ವಿಷಯ ನಿಮಗೆ ಹೇಗೆ ತಿಳಿಯಿತು ಎಂದರೆ ಪಿರ್ಯಾದುದಾರರೇ ನನಗೆ ಫೋನ್ ಮಾಡಿ ತಿಳಿಸಿದರು ಎಂದು ನುಡಿಯುತ್ತಾರೆ.

**ಡಿಡಬ್ಲೂ.1: ದೇವಿಕಾ ಎಲ್ .,**

**<u>ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.</u>**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.